ಪ್ರೊಸಾಫ್ಟ್ ಸಲ್ಯೂಷನ್ಸ್ ಅಂತ ಒಂದು ಸಾಫ್ಟ್‌ವೇರ್ ಕಂಪನಿ ಇದೆ ನಮ್ಮದು.

ಅಡಿಗೆ ಮನೆಯತ್ತ ನಡೆದ ನನ್ನನ್ನು ಆಗಷ್ಟೇ ಒಳಗೆ ಬಂದ ರಾಜಮ್ಮ ತಡೆದರು. ನೀವು ಅಲ್ಲೇ ಕೂತ್ಕೊಳ್ಳಿ.. ನಾನು ಕಾಫಿ ಮಾಡ್ತೀನಿ..

ಹೂಂ... ಥ್ಯಾಂಕ್ಸ್... ಹಿಂತಿರುಗಿ ಬಂದು ಇವರ ಚೇರಿನ ಹಿಂದೆ ನಿಂತೆ. ವಿಶ್ವಾಸ್ ಮುಂದುವರಿಸಿದ.

ನಮ್ಮ ತಂದೆ ಮೂಲಕ ನೋಡಿರೋ ಚಾನ್ಸಸ್ ಕಡಿಮೆ. ನಮ್ಮ ತಾಯಿ ಲತಾ ದೇಶಪಾಂಡೆ.. ಕನ್ನಡ ಚಲನಚಿತ್ರದಲ್ಲಿ ನಾಯಕಿ ಪಾತ್ರ ಮಾಡ್ತಾ ಇದ್ರು... ಈಗ ಫಿಲ್ಮ್ ಪ್ರೊಡ್ಯೂಸರ್... ಐದಾರು ಫಿಲ್ಮ್‌ಗಳನ್ನು ಪ್ರೊಡ್ಯೂಸ್ ಮಾಡಿದ್ದಾರೆ... ನೀವೇನಾದ್ರೂ ಫಿಲ್ಮ್ ಪ್ರೊಡ್ಯೂಸ್ ಮಾಡಿದ್ದೀರಾ?.. ಅಥವಾ ಫಿಲ್ಮ್ ಪಾರ್ಟಿಗಳಿಗೇನಾದ್ರೂ ಬಂದಿದ್ದೀರಾ?.. ಮ್ಯಾಡಂನ ನಾನು ನೋಡಿಲ್ಲ ನಿಮ್ಮನ್ನ ಖಂಡಿತಾ ನೋಡಿದ್ದೀನಿ... ನಮ್ಮ ಡ್ಯಾಡಿಗೆ ಫಿಲ್ಮೀ ಪಾರ್ಟಿಗಳೆಂದರೆ ಅಲರ್ಜಿ.. ನಮ್ಮ ಮಮ್ಮಿಯ ಎಸ್ಕಾರ್ಟ್ ನಾನೇ... ವಿಶ್ವಾಸ್ ಹೇಳುತ್ತಾ ಹೋದ. ಮೊಬೈಲ್ ಫೋನ್ ರಿಂಗಾಗಬಾರದೆ ಎಂದು ಅದನ್ನು ಕೈಯಲ್ಲಿ ಹಿಡಿದು ತಟ್ಟಿದರೆ ಇವರು. ನನಗೆ ಅರಿವಾಯಿತು.

ಕಾಫಿ ತರ್ತೀನಿ...

ನಾನಲ್ಲಿರುವುದರಿಂದ ಇವರಿಗೆ ಮುಜುಗರ... ಎಲ್ಲಿ ಯಾರ ಜೊತೆ ನೋಡಿದ್ದು ಎಂದು ತಿಳಿದ ತಕ್ಷಣ ಆ ವಿಚಾರ ಎತ್ತಿದ್ದಕ್ಕೆ ವಿಶ್ವಾಸ್‌ಗೆ ಮುಜುಗರವಾಗುತ್ತೆ.

ಇವರ ಇತ್ತೀಚಿನ ಗೆಳತಿ ಸಿನಿಮಾ ನಟಿ ಅರ್ಚನಾ... ಇದಕ್ಕೆ ಹಿಂದಿನ ಗೆಳತಿಯೂ ಒಬ್ಬ ಸಿನಿಮಾ ನಟಿಯೇ... ಅವರಿಗೆ ಹೆಚ್ಚಿನ ದುಡ್ಡು... ಇವರಿಗೆ ಹುಚ್ಚು ಮೋಹ, ತೃಷೆ.. ದೊಡ್ಡ ತೆರೆಯ ಮೇಲೆ ಕುಣಿಯುವ ಹುಡುಗಿ ಬಗಲಿನಲ್ಲಿದ್ದರೆ ಏನೋ ಪ್ರತಿಷ್ಠೆ. ಅವರೊಂದಿಗೆ ಪಾರ್ಟಿಗಳಿಗೆ ಹೋಗಿದ್ದರೆ ಆಶ್ಚರ್ಯವೇನಿಲ್ಲ.. ಅದೂ ಹೆಮ್ಮೆಯ ಕುರುಹೇ ಇವರಿಗೆ.... ಎಲ್ಲಾ ಒಪ್ಪಿಕೊಂಡಿರುವ ನನ್ನಂಥ ಹೆಂಡತಿ, ಮಗ ಏನು ಮಾಡಿದರೂ ಸರಿ ಎಂದು ಬೆಂಬಲಿಸುವ ಅಪ್ಪ ಅಮ್ಮ...

ಹಾಲಿನ ಬಾಗಿಲಿಗೆ ಬಂದಿದ್ದ ರಾಜಮ್ಮನಿಂದ ಟ್ರೇ ಇಸಿದುಕೊಂಡು ಅಡಿಗೆಯ ವಿವರ ಹೇಳಿ.. ಹಿಂತಿರುಗಿದಾಗ ಇಬ್ಬರ ನಡುವೆ ಮೌನ ಆವರಿಸಿಕೊಂಡಿತ್ತು.

ಕಾಫಿ... ಇಬ್ಬರ ಮುಂದೆ ಟ್ರೇ ಹಿಡಿದು ನಿಂತೆ.

ಥ್ಯಾಂಕ್ಯೂ..! ನಿಮ್ಮ ಮಕ್ಕಳನ್ನು ನೋಡಿದ್ರೆ ಕಂಪ್ಲೀಟ್ ಫ್ಯಾಮಿಲಿ ನೋಡಿದ ಹಾಗೆ ಆಗುತ್ತದೆ. ನಾನು ಕಾಫಿ ಕುಡಿದು ಮುಗಿಸೋ ಹೊತ್ತಿಗೆ ಬರಬಹುದಲ್ವಾ... ಏನ್ಸಾರ್... ನಿಮಗೆ ಗೊತ್ತಾ?... ನಾನು ಇಳಿದು ಕೊಂಡಿರೋ ಹೋಟೆಲಿನಲ್ಲಿ ನಂಗೆ ಸ್ಪೆಷಲ್ ಟ್ರೀಟ್ಮೆಂಟ್!.. ನಿಮ್ಮ ಫ್ಯಾಮಿಲಿ ಅಂದ್ರೆ ತುಂಬಾ ಗೌರವವಿದೆ ಎಲ್ಲರಿಗೂ..

ಹೊಗಳಿಕೆಯಿಂದ ಕೊಂಚ ಕಳೆ ಬಂತು ಇವರ ಮುಖದ ಮೇಲೆ.

ನಮ್ಮ ತಾತ, ಮುತ್ತಾತನ ಕಾಲದಿಂದ ಈ ಊರಿಗೆ ತುಂಬಾ ಮಾಡಿದ್ದೇವೆ. ರಾಮದೇವರ ದೇವಸ್ಥಾನ ಇದೆ. ಆ ದೇವಸ್ಥಾನಕ್ಕೆ ಸಾವಿರ ವರ್ಷಗಳ ಇತಿಹಾಸವಿದೆ. ಅದರ ಜೀರ್ಣೋದ್ಧಾರ ಮಾಡಿಸಿದ್ದು ನಮ್ಮ ತಾತ. ರಾಮನವಮಿ ಸಮಯದಲ್ಲಿ ತೇರಾಗುತ್ತೆ. ನಮ್ಮ ಹಳ್ಳಿಮನೆ ಕುಟುಂಬದ್ದೇ ಮೊದಲ ಪೂಜೆ, ಶಾಲೆ, ಛತ್ರ, ಕಾಲೇಜು, ಎಂಜಿನಿಯರಿಂಗ್ ಕಾಲೇಜು ಎಲ್ಲಾ ಇದೆ ನಮ್ಮದು.. ಮೆಡಿಕಲ್ ಕಾಲೇಜಿಗೆ ಪರ್ಮಿಷನ್ ಸಿಕ್ಕಿದೆ.. ಕಾಲೇಜು, ಆಸ್ಪತ್ರೆ.. ಎರಡೂ ಆಗುತ್ತೆ ಇನ್ನೆರಡು ವರ್ಷಗಳಲ್ಲಿ.

ಇವರು ಉದ್ದಕ್ಕೆ ಹೇಳುತ್ತಿದ್ದರು. ಮೊದಲು ಇಷ್ಟೊಂದು ಹೇಳಿಕೊಳ್ಳುತ್ತಿರಲಿಲ್ಲ. ರಾಜಕೀಯ ಸೇರಿರುವುದರಿಂದ ಹೀಗೆ ಮಾತೋ ಅಥವಾ ವಿಶ್ವಾಸನಿಗೆ ತಮ್ಮ ಒಳಗುಟ್ಟು ತಿಳಿದಿರುವುದರಿಂದ ಅವನ ಮುಂದೆ ತಮ್ಮ ದೊಡ್ಡಸ್ತಿಕೆ ಹೇಳಿಕೊಳ್ಳುತ್ತಿರುವರೋ... ಅಥವಾ... ನನ್ನ ಗೆಸ್ಟ್ ಎಂದು ಇದೇ ಮೊದಲ ಬಾರಿ ಒಬ್ಬ ಗಂಡಸು ಮನೆಗೆ ಬಂದಿರುವುದು... ಹಾಗಾಗಿ ಅವನನ್ನು ಕುಬ್ಜನನ್ನಾಗಿ ಮಾಡುವ ಹುನ್ನಾರವೋ..

ಅಲ್ಲವೇ?..

ಬೆಚ್ಚಿ ತಲೆ ಎತ್ತಿದೆ.

ಆ್ಲಂ..

ಯಾವ ಲೋಕದಲ್ಲಿ ಇದ್ಯ?... ಎರಡೋ ಮೂರು ವರ್ಷದ ಮೇಲಾಯಿತಲ್ಲವೇ. ಈ ಸ್ತ್ರೀಶಕ್ತಿ ಶುರುವಾಗಿ...? ಈವರೆಗೂ ಅಲ್ಲಿ ತರಗತಿ ನಡೆಸಿದವರು ಯಾರೂ ಮನೆಗೆ ಬಂದಿರಲ್ಲಿಲ್ಲ..... ವಿಶ್ವಾಸನ ಮುಂದೆಯೇ ಈ ತರಹ ಪ್ರಶ್ನೆ ಕೇಳಿದರೆ ಉತ್ತರಿಸುವುದು ಹೇಗೆ?... ಅದು ಹೇಗೆ ಈ ರೀತಿ ಪ್ರಶ್ನೆ ಕೇಳುತ್ತಾರೆ.

ಮತ್ತೆ... ಏನೆಂದು ಉತ್ತರಿಸುವುದು?

ಸದ್ಯ! ನಾನು.. ನಾನೇ ಬಂದೆ! ನಿಮ್ಮ ಮನೆಗೆ ಅನ್‌ಇನ್ವೈಟೆಡ್!.. ನಿಮ್ಮ ಊರಲ್ಲಿ ಇರೋ ಮೂರು ಥಿಯೇಟರ್‌ನಲ್ಲಿ ಇರೋ ಮೂವೀಗಳನ್ನು ನಾನು ನೋಡಿಯಾಗಿದೆ. ನನ್ನ ಲ್ಯಾಪ್‌ಟಾಪ್‌ನ ಪುಟ್ಟ ಸ್ಕ್ರೀನಿನಲ್ಲಿ ನೋಡೋಕ್ಕೆ ಬೋರು.. ನಾನು ಟಿ.ವಿ. ನೋಡಲ್ಲ. ಅದಕ್ಕೆ ಯಾವುದಾದರೂ ಕಥೆ ಪುಸ್ತಕ ಕೂಡಿ ಅಂತ ನಾನೇ ಬಂದೆ... ತಪ್ಪಾಯ್ತಾ?....

ಇಲ್ಲ.. ಸುಮ್ನೆ ಕೇಳ್ದೆ... ಸುಮ್ಮನಾದರು ಇವರು.

ಅಬ್ಬ.. ಎಷ್ಟು ಸಲೀಸಾಗಿ, ಸರಿಯಾಗಿ ಮಾತಾಡ್ತಾನೆ ವಿಶ್ವಾಸ್.... ಕೇಳಬೇಕು... ಹೇಗೆ ಸಾಧ್ಯ ಅಂತ.....

ನಾನು ಬರ್ತೀನ್ರೀ.. ಥ್ಯಾಂಕ್ಸ್ ಫಾರ್ ದಿ ಕಾಫಿ... ಬರ್ತೀನಿ ಮೀ. ವಿಕ್ರಂ...!. ನನ್ನೆಡೆ ನಗೆ ಬೀರಿ. ಇವರ ಕೈ ಕುಲುಕಿ, ನನ್ನ ಪುಸ್ತಕಗಳನ್ನು ಹಿಡಿದು ಹೊರ ನಡೆದ ವಿಶ್ವಾಸ್ ಅವನ ಹಿಂದೆ ನಡೆದೆ.

ನನ್ನ ಮೊಬೈಲ್ ಚಾರ್ಜರ್ ನೋಡು.. ಎಲ್ಲಿದೆ ಅಂತ... ನಿಂತು ಹಿಂತಿರುಗಿದೆ. ಕೂತಲೇ ಕೂತಿದ್ದರು.

ಬರ್ತೀನಿ.. ವಿಶ್ವಾಸನ್ನ ಕಳಿಸಿಕೊಟ್ಟು ಬರ್ತೀನಿ... ಡೈನಿಂಗ್ ಟೇಬಲ್ ಹತ್ತಿರ ಇರಬೇಕು ನೋಡಿ... ಹೇಳಿ ಮುಂದೆ ನಡೆದೆ.

ನನ್ನ ಹಿಂದೆ ಬಂದ್ರಿ ಅಂತ ನಿಮ್ಮ ಯಜಮಾನರಿಗೆ ಕೋಪ ಬಂತು ಅನ್ಸುತ್ತೆ.. ಹೋಗಿ ಪರ್ವಾಗಿಲ್ಲ..

ಇಷ್ಟು ಹೇಳುವ ಹೊತ್ತಿಗೆ ವರಾಂಡವೂ ದಾಟಿ ಬೀದಿ ಬಾಗಿಲಿಗಿದ್ದ ಮೂರು ಮೆಟ್ಟಿಲು ಇಳಿದಿದ್ದ ವಿಶ್ವಾಸ್.

ಬಾಗಿಲಲ್ಲೇ ನಿಂತು ನಾನು ಮುಗುಳ್ನಕ್ಕೆ. ಹತ್ತೆಂಟು ಹೆಣ್ಣುಗಳ ಹಿಂದೆ ಇವರು ಹೋಗಿದ್ದಾರೆ. ನಾನು.. ಇವನ ಹಿಂದೆ ಹೋದರೆ.. ಯಾಕೋ ನಗೆ ಉಕ್ಕಿ ಬಂತು. ಮುಗುಳ್ನಗೆ ಪೂರ್ಣ ನಗುವಿಗೆ ತಿರುಗಿತು.

ಏನು ಜೋಕು ಹೇಳ್ರೀ.. ನೀವೊಬ್ಬರೇ ಹೀಗೆ ನಗ್ತಾ ಇದೀರಲ್ಲ.. ವಿಶ್ವಾಸ್ ಕೇಳಿದಾಗ ಅಡ್ಡಡ್ಡಲಾಗಿ ತಲೆಯಾಡಿಸಿದೆ.

ನಮ್ಮ ತಾಯಿ ಫಿಲ್ಮ್ ಪ್ರೊಡ್ಯೂಸರ್ ಆಗಿರೋದರಿಂದ ನಾನು ಎಷ್ಟೊಂದು ಮಂದಿ ಸಿನಿಮಾ ನಟಿಯರನ್ನು ಭೇಟಿಯಾಗಿದ್ದೇನೆ. ಆದರೆ ನಿಮ್ಮಷ್ಟು ಸುಂದರವಾಗಿ ಇರುವವರನ್ನು, ನಗುವವರನ್ನು ನಾನು ನೋಡಿಯೇ ಇಲ್ಲ... ಯುವಕನ ಹೊಗಳಿಕೆಗೆ ಮನ ಅರಳಿತು. ಆದರೆ ನನ್ನಲ್ಲಿದ್ದ ಗೃಹಿಣಿ ಎಚ್ಚೆತ್ತಳು.

ಓ... ಮಕ್ಕಳು ಬಂದರು ನೀವು ಈ ಕಾರಿನಲ್ಲಿ ಡ್ರಾಪ್ ತೊಗೊಳಿ... ಕಾಂಪೌಂಡಿನೊಳಗೆ ಬಂದ ಕಾರು ಪೋರ್ಟಿಕೋದಲ್ಲಿ ನಿಂತಿತು.

ಇಲ್ಲ.. ಬೇಡ.. ನಾನು ನಡೆದುಕೊಂಡೇ ಹೋಗ್ತೀನಿ.. ನಿಮ್ಮ ಮಕ್ಕಳು.... ಓ ಗಾಡ್!... ಇಷ್ಟು ದೊಡ್ಡ ಮಕ್ಕಳೇನ್ರಿ ನಿಮಗೆ...! ನಂಗೆ ನಂಬೋಕ್ಕೇ ಆಗಲ್ಲ...

ಕಾರಿನ ಬಾಗಿಲು ತೆಗೆದು ರಾಹುಲ್, ರಾಧಿಕಾ ಇಳಿದ ಮೇಲೆ ಅವರನ್ನು ಮಾತಾಡಿಸುತ್ತಾ ನಿಂತ ವಿಶ್ವಾಸ್.

ಅಪರಿಚಿತರೊಡನೆ ಅಷ್ಟು ಸಲೀಸಾಗಿ ಮಾತಾಡದ ಮಕ್ಕಳಿಗೆ ಏನು ಮೋಡಿ ಮಾಡಿದನೋ ಏನೋ ಅವನೊಡನೆ ನಗುತ್ತಾ ಮಾತಾಡುತ್ತಿದ್ದರು.

ಕೈಯಲ್ಲಿದ್ದ ಪುಸ್ತಕಗಳನ್ನು ಕಾರಿನ ಟಾಪಿನ ಮೇಲಿಟ್ಟು ರಾಧಿಕಾಳನ್ನು ಎತ್ತಿ ಕಾರಿನ ಟಾಪಿನ ಮೇಲೆ ಕೂರಿಸಿದ. ಸಂತಸದಿಂದ ಅವಳು ಮುಖ ಅರಳಿತು. ಮೆಟ್ಟಿಲು ಹತ್ತಿ ಒಳಗೆ ಧಾವಿಸುತ್ತಿದ್ದ ರಾಹುಲ್‌ನನ್ನು ತಡೆದೆ.

ಏನು?... ಯಾಕೆ ಹೀಗೆ ಓಡ್ತಿದ್ಯ?...

ಬ್ಯಾಟ್ ಬಾಲ್ ತರೋಕ್ಕೆ!... ಅಂಕಲ್ ನಮ್ಮ ಜೊತೆ ಕ್ರಿಕೆಟ್ ಆಡ್ತಾರಂತೆ..

ಈಗ ಬೇಡ.. ಕತ್ಲಾಗ್ತಾ ಇದೆ... ಇವನು ಯಾಕೋ ಹೊರಡೋ ಲಕ್ಷಣವೇ ಇಲ್ಲ..

ಕತ್ಲಾಗ್ತಾ ಇದೆ.. ಆದ್ರೆ ಕತ್ತಲಾಗಿಲ್ಲವಲ್ಲ?... ಮೂರು ಜನಾನೂ ಮೂರು ಮೂರು ಬಾಲ್ ಅಷ್ಟೇ.. ಬೇಗ ತೊಗೊಂಡ್ಬಾ ರಾಹುಲ್... ವರಾಂಡದಲ್ಲೇ ಮೂಲೆಯಲ್ಲಿದ್ದ ಕ್ರಿಕೆಟ್ ಬ್ಯಾಟು, ವಿಕೆಟ್ಟು, ಬಾಲು ಎಲ್ಲಾ ಹೊತ್ತುಕೊಂಡು ಹೊರಗೆ ಓಡಿದ ರಾಹುಲ್.

ನರಹರಿಗೂ ಉತ್ಸಾಹ. ಬ್ಯಾಟು, ಬಾಲು ವಿಕೆಟ್ಟು ಕೊಂಡು ತಂದಿದ್ದಷ್ಟೇ.. ಆದರೆ ಮಕ್ಕಳು ಆಡಿದ್ದು ಕಡಿಮೆಯೇ... ದೊಡ್ಡ ಬಂಗಲೆ ನಮ್ಮದು. ಅಕ್ಕಪಕ್ಕದ